**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.185/2022

**PW**. 4

**CW**. 8

**ಸಾಕ್ಷಿಯ ಹೆಸರು –ಪಾಲಕ್ಷ**

**ತಂದೆಯ ಹೆಸರು –ಮಹದೇವಪ್ಪ**

**ವಯಸ್ಸು –40 ವರ್ಷಗಳು** ದಿನಾಂಕ 22–04–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಮುಳ್ಳೂರು ಗ್ರಾಮ , ಹೆಚ್ ಡಿ ಕೋಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1, 2 , ಮೃತ ಮತ್ತು 1 ನೇ ಆರೋಪಿ ಗೊತ್ತು. ಈಗ್ಗೆ 3 ವರ್ಷಗಳ ಹಿಂದೆ ಮೃತ ಬಸವರಾಜನನ್ನು 1 ನೇ ಆರೋಪಿ ಕೊಲೆ ಮಾಡಿ ಸಾಯಿಸಿದ್ದಾಳೆ ಎಂದು ಗೊತ್ತಾಯಿತು. ಪೊಲೀಸರು ಸ್ಥಳಕ್ಕೆ ಬಂದ ನಂತರ ನಾನು ಅವರ ಮನೆಯ ಬಳಿ ಹೋಗಿದ್ದೆ. ಸ್ಥಳದಲ್ಲಿ ನಮ್ಮ ಊರಿನ ಚಾಸಾ–13,17 ಇತರರು ಸೇರಿದ್ದರು. ನಾನು ನೋಡಿದಾಗ ಶವವನ್ನು ರೂಮಿನಿಂದ ಹೊರಗೆ ತಂದು ಮಲಗಿಸಿದ್ದರು. ಮೃತನ ಬಾಯಲ್ಲಿ ಮತ್ತು ಮರ್ಮಾಂಗದಲ್ಲಿ ರಕ್ತ ಬಂದಿತ್ತು. ಮೃತ ಬಸವರಾಜು 1 ನೇ ಆರೋಪಿ ಮತ್ತು 3 ವರ್ಷದ ಮಗುವಿನ ಜೊತೆ ಅನ್ಯೋನ್ಯವಾಗಿ ವಾಸ ಮಾಡುತ್ತಿದ್ದ. ಊರಿನಲ್ಲಿ ಜನರು ಮಾತನಾಡುತ್ತಿದ್ದ ಕಾರಣ ಕೊಲೆ ಬಗ್ಗೆ ನನಗೆ ಗೊತ್ತಾಯಿತು. ಮೃತ ಬಸವರಾಜು ತಂದೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದರು. ಶವವನ್ನು ಆಸ್ಪತ್ರೆಗೆ ಸಾಗಿಸಿದಾಗ ನಾನು ಆಸ್ಪತ್ರೆಗೆ ಹೋಗಿದ್ದೆ, ಆ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಮೃತ ಬಸವರಾಜು ಮತ್ತು 1 ನೇ ಆರೋಪಿ 15 ವರ್ಷಗಳ ಹಿಂದೆ ಮದುವೆಯಾಗಿ ಅನೋನ್ಯವಾಗಿದ್ದರು ಎಂದರೆ ಸರಿ. ಮೃತ ವಾಸವಾಗಿದ್ದ ಮನೆಯ ಅಕ್ಕಪಕ್ಕದಲ್ಲಿ ಬೇರೆ ಬೇರೆ ವಾಸದ ಮನೆಗಳು ಇವೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.